ದಿಃ 21-02-2018 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ  ಪ್ರತಿವಾದಿ ಪರ ಶ್ರೀ ಪಿ.ಎಸ್.ಟಿ ವಕೀಲರವರಿಂದ;

ನಾನು ಶಾಲೆ ಕಲಿತಿಲ್ಲ. 1960 ರಲ್ಲಿ ನನ್ನ ವಯಸ್ಸು ಎಷ್ಟು ಎಂದರೆ ನಾನು ಹುಟ್ಟಿರಲಿಲ್ಲ. 1960 ರಲ್ಲಿ 2 ನೇ ವಾದಿ ಮತ್ತು ಮೃತ ಲಕ್ಷ್ಮಣರವರ ಮದುವೆಯ ರೀತಿ-ರಿವಾಜಿನ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ.

ದಾವಾ ಸ್ವತ್ತುಗಳಲ್ಲಿ ಹೇಳಲಾದ ಆಸ್ತಿ ನಂ.1 ಮತ್ತು 3 ಆಸ್ತಿಗಳು ನಮ್ಮ ತಂದೆಗೆ 1974 ರಲ್ಲಿ ಬಂದಿರುತ್ತವೆ ( ಕರ್ನಾಟಕ ಲ್ಯಾಂಡ ರಿಫಾರ್ಮ್ಸ ಕಾಯ್ದೆ ಅಡಿ). ದಾವಾ ಸ್ವತ್ತುಗಳಲ್ಲಿ 1 ನೇ ಶೆಡ್ಯೂಲ್‌ನಲ್ಲಿ ಐಟಂ. ನಂ. 1 ರಿಂದ 5 ದಾವಾ ಸ್ವತ್ತುಗಳು ನಮ್ಮ ತಂದೆಯ ಅಣ್ಣ-ತಮ್ಮಂದಿರ ನಡುವೆ 1975-80 ಇಸ್ವಿ ಮಧ್ಯದಲ್ಲಿ ಪಾಲಾಗಿರುತ್ತವೆ ಎಂದರೆ ಸರಿ. ವಾದಿಯರು ಮೊದಲೆ ಆದ ಪಾಲನ್ನು ಬಿಟ್ಟು ಪುನಃ ಪಾಲನ್ನು ಮಾಡಬೇಕೆಂದು ಈ ದಾವೆಯನ್ನು ಹೂಡಿಲ್ಲಾ ಎಂದರೆ ವಾದಿಯರು ತಮ್ಮ ಪಾಲನ್ನು ಕೇಳಿ ಈ ದಾವೆಯನು ಹೂಡಿರುತ್ತಾರೆ. ದಾವಾ ಸ್ವತ್ತು ಸರ್ವೆ ನಂ. 72/25 ದಾವಾ ಮೇಲೆ ನಾನು 3 ನೇ ಪ್ರತಿವಾದಿಯ ಮೇಲೆ ಮನಾಯಿ ದಾವೆ ಹೂಡಿದ್ದೇನು ಎಂದರೆ ಸರಿ.ಸದರಿ ದಾವೆ ಇನ್ನು ಚಾಲ್ತಿಯಲ್ಲಿರುತ್ತದೆ.

ಮೃತ ಲಕ್ಷ್ಮಣ ಕೆ.ಎಚ್.ಐ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಸದರಿಯವರು 1987 ರಲ್ಲಿ ತೀರಿಕೊಂಡಿರುತ್ತಾರೆ.

ಈ ದಾವೆಯಲ್ಲಿ ಮೃತ ಲಕ್ಷ್ಮಣ ತೀರಿಕೊಂಡು ದಿನಾಂಕದ ಬಗ್ಗೆ ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ನನಗೆ ಮತ್ತು ಪ್ರತಿವಾದಿ 1 ಮತ್ತು 3 ರ ನಡುವೆ ಉತ್ತಮ ಭಾಂದವ್ಯ ಇಲ್ಲ ಎಂದರೆ ಅವರು ಮತ್ತು ನಾನು ಮಾತನಾಡುತ್ತೇವೆ. ದಾವಾ ಸ್ವತ್ತು ಸರ್ವೆ ನಂ. 94/11,72/25 ಮತ್ತು 72/8/23/ಬಿ ಮೃತ ಲಕ್ಷ್ಮಣ ಯಲ್ಲಪ್ಪ ಖರೀದಿಸಿದ್ದು ಎಂದರೆ ಸರಿ. ದಾವಾ ಸ್ವತ್ತುಗಳು ಪತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಸರ್ವೆ ನಂ 6/1 ಅ  ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣದ ಚಾಲ್ತಿಯಲ್ಲಿ ಇದೆ ಎಂದರೆ ಸರಿ. 1980 ರಲ್ಲಿ ನಮ್ಮ ತಂದೆಯರ ನಡುವೆ ಆಸ್ತಿ ಪಾಲಾದ ಸಮಯದಲ್ಲಿ ವಾದಿಯರು ಪಾಲು ಕೇಳಿರುವುದಿಲ್ಲ. ಮೃತ ಲಕ್ಷ್ಮಣ ತೀರಿಕೊಂಡ ನಂತರ ಪಾಲನ್ನು ಕೇಳಿರುವುದಿಲ್ಲ ಎಂದರೆ ಈಗ ಪಾಲು ಕೇಳಿರುತ್ತಾರೆ.

ವಾದಿಯವರು ಚಿಂಚಲಿ ಗ್ರಾಮವನ್ನು ಯಾವಾಗ ಬಿಟ್ಟಿರುತ್ತಾರೆ ಎಂದರೆ 1972 ರಲ್ಲಿ ಬಿಟ್ಟು ಹೋಗಿರುತ್ತಾರೆ. ಸಾಕ್ಷಿ ಮುಂದುವರೆದು ಮದುವೆಯಾದ 11 ವರ್ಷಕ್ಕೆ ಬಿಟ್ಟು ಹೋಗಿರುತ್ತಾರೆ ಮತ್ತು ಮಧ್ಯದಲ್ಲಿ ಬಂದು-ಹೋಗುವುದನ್ನು ಮಾಡಿರುತ್ತಾರೆ. 1 ನೇ ವಾದಿ ಸುಮಾರು 1964 ರಲ್ಲಿ ಹುಟ್ಟಿರುತ್ತಾರೆ. ಸದರಿ ವಿಚಾರದ ಬಗ್ಗೆ ವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ.  1 ನೇ ವಾದಿ ಚಿಂಚಲಿಯಲ್ಲಿ ಹುಟ್ಟಿರುತ್ತಾರೆ ಎಂದರೆ ಘಟಪ್ರಭಾದಲ್ಲಿ ಹುಟ್ಟಿರುತ್ತಾರೆ. ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸದರಿ ವಿಚಾರವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ವಾದಿ ಮೃತ ಲಕ್ಷ್ಮಣನವರೊಂದಿಗೆ ಯಾವುದೇ ಮದುವೆಯಾಗಿಲ್ಲ ಮತ್ತು ಖಾಯಂ ಆಗಿ ಚಿಂಚಲಿಯಲ್ಲಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಮೃತ ಲಕ್ಷ್ಮಣ ವಾದಿಯವರಿಗೆ ಹೊಡೆದು ಮನೆಯಿಂದ ಹೊರಹಾಕಿರುತ್ತಾನೆ ಎಂದು ವಾದ ಪತ್ರದಲ್ಲಿ ಹೇಳಿರುವುದಿಲ್ಲಈ ದಾವೆಯಲ್ಲಿ ಹಾಜರ ಪಡಿಸಿದ ಕಾಗದವುಗಳ ಬಗ್ಗೆ ನನಗೆ ಗೊತ್ತಿರುತ್ತದೆ.

ನಿಪಿ 9 ರಲ್ಲಿ ನಮೂದಿಸಿದ ಮರಣ ದಿನಾಂಕವು ತಪ್ಪಾಗಿರುತ್ತದೆ. ಈ ದಾವೆಗೆ ಸಂಬಂಧಪಟ್ಟಂತಹ ಕಾಗದ ಪತ್ರಗಳನ್ನು ತೆಗೆಸಲು ನಾನು ವಾದಿಯವರಿಗೆ ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2012 ರಲ್ಲಿ 1 ನೇ ವಾದಿ ಮಗಳನ್ನು ನನ್ನ ಮಗನಿಗೆ ತೆಗೆದುಕೊಳ್ಳಲು ಮಾತುಕತೆಯಾಗಿತ್ತು ಎಂದರೆ ಸರಿ. 2 ನೇ ವಾದಿ ಮತ್ತು ಮೃತ ಲಕ್ಷ್ಮಣರವರ ಮದುವೆ 50 ವರ್ಷಗಳ ಹಿಂದೆ ಆಗಿದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. 3 ನೇ ಶೆಡ್ಯೂಲ್ ದಾವಾ ಸ್ವತ್ತುಗಳು ಪ್ರತಿವಾದಿ ನಂ. 1 ಮತ್ತು 3 ಸ್ವಂತ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ಸ್ವಂತ ಆಸ್ತಿ ಅಲ್ಲ ಅಂತಾ ಹೇಳಲು ಯಾವುದೇ ಕಾಗದ ಪತ್ರಗಳು ನನ್ನಲ್ಲಿ ಇಲ್ಲ ಮತ್ತು ಹಾಜರುಪಡಿಸಿಲ್ಲ ನಿಪಿ 1 ರಿಂದ ನಿಪಿ 5 ಕಾಗದಗಳನ್ನು ನಾನು ಮತ್ತು ವಾದಿಯರು ಯಾವುದೇ ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ.

ನಿಪಿ 9 ರಿಂದ 13 ರ ಕಾಗದಗಳನ್ನು ಈ ದಾವೆಯನ್ನು ಹೂಡಿದ ನಂತರ ಖೊಟ್ಟಿಯಾಗಿ ತಯಾರಿಸಿ ಹಾಜರ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿಗೆ ಮತ್ತು  ಮೃತ ಲಕ್ಷ್ಮಣನಿಗೆ ಮದುವೆಯಾಗಿಲ್ಲ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ನಮ್ಮ ಅಣ್ಣತಮ್ಮಂದಿರ ನಡುವೆ ಸರಿಯಾದ ಭಾಂದವ್ಯ ಇರುವುದಿಲ್ಲ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ವಾದಿಯವರ ಕಡೆಯಿಂದ ಹೂಡಿಸಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ವೀರೇಶ ಕುಮಾರ ಸಿ. ಕೆ.)
ಹೆ.ದಿ.&ನ್ಯಾದಂ., ಗೋಕಾಕ.